**ದಿನಾಂಕ:22.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ACH ವಕೀಲರಿಂದ:-**

ನಾನು ಪ್ರತಿವಾದಿ ವಿರುದ್ದ ದಿಃ 11.06.2018 ರಂದು ಈ ದಾವೆ ದಾಖಲು ಮಾಡಿರುತ್ತೇನೆ. ನೀವು ಈ ದಾವೆ ಹೂಡಿದಾಗಿನಿಂದ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ರವರು ದಾವಾ ಸ್ವತ್ತಿನ ಮಾಲೀಕರಾಗಿದ್ದು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಕ್ರಯ ಪತ್ರ ಸಬ ರಜಿಸ್ಟರ ಕಚೇರಿಯಲ್ಲಿ ನೊಂದಣಿ ಆಗಿರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎನುತ್ತಾರೆ. ನಿಮ್ಮ ನೊಂದಾಯಿತವಲ್ಲದ ಕ್ರಯ ಪತ್ರ ದಿಃ 27.03.2000 ಎಂದರೆ ಸರಿ. ನೀವು ಖರೀದಿಸಿದ ಹೇಳಲಾದ ದಾವಾ ಸ್ವತ್ತು RTC ಯಲ್ಲಿ ನಿಮ್ಮ ಹೆಸರು ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನೀವು ಸ್ವಾ ಧೀನದಲ್ಲಿ ಇರುವುದಕ್ಕೆ ಸಂಬಂಧಿಸಿದಂತೆ ಆದಾರಕಾರ್ಡ ಆಗಲಿ, ರೇಶನ ಕಾರ್ಡ ಆಗಲಿ ವೋಟರ ಐಡಿ ಆಗಲಿ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ರೇಶನ ಕಾರ್ಡ ಹಾಜರು ಪಡಿಸಿರುತ್ತೇನೆ ಎನ್ನುತ್ತಾರೆ. ದಾವಾ ಸ್ವತ್ತಿಗೂ ನಿಮಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿ ಕಾನೂನು ಬದ್ದವಾಗಿ ಖರೀದಿ ಮಾಡಿರುತ್ತಾರೆ ನೀವು ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಿಮಗೆ ಹಕ್ಕು ಇದೆ ಎಂದು ತೋರಿಸಲು ನೊಂದಾಯಿತ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಿರುತ್ತೇನೆ ಎನ್ನುತ್ತಾರೆ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**